# ಜಡೆ ಕಳ್ಳಿ

ಚಿತ್ರ– ಬರಹ:
**ಲತಾ ಹೆಗಡೆ**

ಔಷಧೀಯ ಗುಣಗಳು ಹೇರಳವಾಗಿರುವ ಈ ಅಲಂಕಾರಿಕ ಸಸ್ಯಕ್ಯಾಕ್ಟಸ್ ಅಥವಾ ಕಳ್ಳಿ ಜಾತಿಗೆ ಸೇರಿದ್ದು ಕನ್ನಡದಲ್ಲಿ ಜಡೆ ಕಳ್ಳಿ , ಕೊಂಬೆ ಕಳ್ಳಿ ಎಂದು ಕರೆಯುತ್ತಾರೆ. ಇಂಗ್ಲಿಷ್‌ನಲ್ಲಿ 'ಟ್ರೈಯಾಂಗುಲರ್ ಮಿಲ್ಕ್ ವರ್ಟ್' ಎನ್ನಲಾಗುತ್ತಿದೆ. ಇದರ ಸಸ್ಯಶಾಸ್ತ್ರೀಯ ಹೆಸರು 'ಯುಫೋರ್ಬಿಯಾ ಆಂಟಿಕ್ಯೋರಮ್' ( **Euphorbia Antiquorum**) ಎಂದಾಗಿದೆ.

ವರ್ಷವಿಡೀ ಬೆಳೆಯುವ ಈ ಅಲಂಕಾರಿಕ ಕಳ್ಳಿ ಸಸ್ಯ ಫಿಲಿಪ್ಪೀನ್ಸ್ ದೇಶದ ಉದ್ದಗಲಕ್ಕೂ ಹೇರಳವಾಗಿ ಕಂಡುಬರುತ್ತದೆ. 2000 ಕ್ಕಿಂತಲೂ ಹೆಚ್ಚು ಪ್ರಬೇಧಗಳಿವೆ. ಕಳ್ಳಿ ಗಿಡಗಳಲ್ಲಿ ಹೂವಿನ ರಚನೆ ಬಲು ವಿಶಿಷ್ಟ ಹಾಗೂ ಮನೋಹರ. ಸಾಮಾನ್ಯವಾಗಿ ಒಂದರಿಂದ ಮೂರು ಮೀಟರ್‌ನಷ್ಟು ಎತ್ತರ ಬೆಳೆಯುವ ಜಡೆಕಳ್ಳಿ ಪೊದೆಯಂತೆ ಬೆಳೆಯುತ್ತದೆ. ಆಸರೆ ಕೊಟ್ಟು ಬೆಳೆಸಿದಲ್ಲಿ ನಾಲ್ಕೈದು ಅಡಿಗಳಷ್ಟು ಬೆಳೆಸಬಹುದು.

ಚಪ್ಪಟೆ ಹಾಗೂ ತ್ರಿಕೋನಾಕಾರದಲ್ಲಿದ್ದು ಅಂಚು ಮುಳ್ಳುಗಳಿಂದ ಕೂಡಿರುತ್ತದೆ. ಪ್ರತಿಯೊಂದು ದೇಟಿಗೂ ನಾಲ್ಕೈದು ಕವಲುಗಳಿರುತ್ತವೆ. ಬಲಿತ ದೇಟು ಚಪ್ಪಟೆಯಾಗಿರದೆ ಗುಂಡಗೆ ತುಂಬಿಕೊಂಡಿರುತ್ತದೆ. ಸ್ಪಂಜಿನಂತೆ ಮೆತ್ತಗಿದ್ದು ಮುರಿದರೆ ಹಾಲಿನಂತಹ ದ್ರಾವಣ ಒಸರುವ ಇದರ ರುಚಿ ಕಹಿ. ಇದು ವಿಷಕಾರಿ ಅಂಶವನ್ನು ಹೊಂದಿದ್ದರೂ ಹುರಿದ ನಂತರ ಈ ಅಂಶ ಕಡಿಮೆಯಾಗಿ ಔಷಧೀಯ ರೂಪದಲ್ಲಿ ಹೊಟ್ಟೆಗೆ ಸೇವಿಸಬಹುದು.

ಜಡೆ ಕಳ್ಳಿಯಲ್ಲಿ ಔಷಧೀಯ ಗುಣ ಅಗಾಧವಾಗಿದ್ದು ಸುಟ್ಟಗಾಯಗಳಿಗೆ ಇದರ ರಸ ಸವರುತ್ತಾರೆ. ಇದರಲ್ಲಿರುವ ತಂಪುಮಾಡುವ ವಿಶಿಷ್ಟ ಗುಣವಿದೆ. ಉರಿಯೂತ, ನೋವಿನ ಶಮನಕ್ಕೆ ಇದು ಸಹಾಯಕಾರಿ. ಎದೆನೋವು ಹಾಗೂ ಮಲಬದ್ಧತೆಯ ನಿವಾರಣೆಗೆ ಬಳಸಲ್ಪಡುವ ಇದು ಅರ್ಬುದ ರೋಗವನ್ನು ನಿಯಂತ್ರಿಸುತ್ತದೆ ಎನ್ನುವವರಿದ್ದಾರೆ. ಆದರೆ ಇದನ್ನು ಔಷಧೀಯ ರೂಪದಲ್ಲಿ ದೀರ್ಘಕಾಲ ಸೇವಿಸಿದಲ್ಲಿ ಬೇಧಿಗೆ ಎಡೆಮಾಡಬಹುದು. ಇದರ ತೊಗಟೆಯನ್ನು ವಿರೇಚಕವಾಗಿಯೂ, ಲವಣಯುಕ್ತ ಸಾರ ಆಂಟಿಬಯೋಟಿಕ್ ಆಗಿಯೂ ಬಳಕೆಯಾಗುತ್ತದೆ.



